ಹರಿಯುವ ಮಲಾಪಹಾರಿಯೇ
ಅಪ್ಪಿದ ಬಳ್ಳಿಯ ತರುಮರವೇ

ರೆಂಬೆ ಕೊಂಬೆಯ ಹಕ್ಕಿಮರಿಗಳೇ,
ಏಳು ಕೋಟಿ ಜನರ ಎಲ್ಲವ್ವ ತಾಯಿ;
ಬಳ್ಳಿ ಹರಿದ ಮನಕ್ಕೆ
ನಿನ್ನೆಡೆಯ ದಾರಿ ಮುಚ್ಚಿತಲ್ಲಾ;
ಮರೆಯಾದ ನನ್ನ ಮನವಳ್ಳಿಯೇ
ಕಂಡದ್ದು ಇಷ್ಟು ಮಾತ್ರವೇ...?

ಹೀಗೆ ಏನೇನೋ ಗೊಣಗುತ್ತಿದ್ದರು. ಅದು ಚೀಟಿಯೊಳಗಿನ ವಾಕ್ಯವೋ, ಇಲ್ಲಾ ಅವರಿಗವರೇ...'

ದೂರವಾಣಿಯ ಅವಧಿ ಮುಗಿದದ್ದರಿಂದ ಸಮೀರನ ಮಾತು ನಿಂತುಹೋಯಿತು. ಸದಾನಂದಯ್ಯ ರಿಸೀವರನ್ನು ಕಿವಿಗೆ ಒತ್ತಿಯೇ ಹಿಡಿದಿದ್ದರು.

ಹನಿ ಉದುರಬಹುದೇ ಎಂದು ಆಕಾಶದ ಮೋಡ ನೋಡುತ್ತ ಅನ್ನಪೂರ್ಣಮ್ಮ ಹಪ್ಪಳ, ಸಂಡಿಗೆ ಒಟ್ಟು ಮಾಡುತ್ತಿದ್ದವರು, 'ಪೂರ್ವಿ, ಸಮ್ಮಿ ಫೋನಿನಲ್ಲಿದ್ದಾನೆ ಹೇಗಿದ್ದೀಯಾ ಅಪ್ಪ ಅಂತ ಕೇಳು ಹೋಗು, ಇಕೋ ನಾನೂ ಬಂದೆ, ಇವತ್ತು ಸ್ಕೂಲಿನಲ್ಲಿ ಯಾವ ಪಾಠ ಹೇಳಿಕೊಟ್ಟರು' ಅಂದರು. ಪೂರ್ವಿ ಕನ್ನಡ ಪುಸ್ತಕ ತೆರೆದು ಶಾಲೆಯಲ್ಲಿ ಹೇಳಿಕೊಟ್ಟ ಪಾಠದ ಒಂದೊಂದೇ ಅಕ್ಷರವನ್ನು ಬಿಡಿಸಿ, ಬಿಡಿಸಿ ಓದಿ ಆಮೇಲೆ ಎಲ್ಲವನ್ನು ಒಟ್ಟಿಗೆ ಜೋಡಿಸಿದವಳಂತೆ 'ಧರ್ಮವ್ಯಾಧನ ಕತೆ' ಎಂದು ಮನೆ ಮನೆಗೆ ಕೇಳಿಸುವಂತೆ ಜೋರಾಗಿ ಕೂಗಿದಳು. ಅಜ್ಜಿ, ಶಾಲೆಯಲ್ಲಿ ಮೇಷ್ಟ್ರು ಹೇಳಿಕೊಟ್ಟದ್ದನ್ನು ತಾತನ ಮುಂದೆ ಓದು ಹೋಗು ನೋಡೋಣ, ಸರಿ ತಪ್ಪು ಹೇಳಿಕೊಡುತ್ತಾರೆ ಅಂದರು. ಇತ್ತ ಮೌನದಲ್ಲಿದ್ದ ಸದಾನಂದಯ್ಯನವರ ಕಣ್ಣೊಳಗಿನ ಹನಿ ದೂರವಾಣಿಯ ಮೇಲೆ ಉದುರಿತು.

## ಕೃಷ್ಣಮೂರ್ತಿ ಹನೂರು

ಜಾನಪದ ತಜ್ಞ, ಕತೆಗಾರ, ಕಾದಂಬರಿಕಾರ ಕೃಷ್ಣಮೂರ್ತಿ ಹನೂರು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ಎಮಿರಿಟಸ್ ಪ್ರಾಧ್ಯಾಪಕರಾಗಿದ್ದಾರೆ. 40ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಕೇರಿಗೆ ಬಂದ ಹೋರಿ', 'ಕತ್ತಲಲ್ಲಿ ಕಂಡ ಮುಖ' ಮತ್ತು 'ಕಳೆದ ಮಂಗಳವಾರ ಮುಸ್ಸಂಜೆ' ಅವರ ಕಥಾಸಂಕಲನಗಳು. 'ಬಾರೋ ಗೀಜಗನೆ', 'ನಿಕ್ಷೇಪ', 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿಗಳು. ಅವರು ಸಂಪಾದಿಸಿದ ವಿಶ್ವಕೋಶ 'ಎನ್‌ಸೈಕ್ಲೋಪಿಡಿಯಾ ಆಫ್ ಫೋಕ್‌ಕಲ್ಚರ್ ಆಫ್ ಕರ್ನಾಟಕ' ಕನ್ನಡ ಜಾನಪದವನ್ನು ಇಂಗ್ಲಿಷ್‌ನಲ್ಲಿ ಪರಿಚಯಿಸುತ್ತದೆ. ಅವರ ಪಿಎಚ್.ಡಿ. ಮಹಾಪ್ರಬಂಧ 'ಮ್ಯಾಸ ಬೇಡರು' ಬುಡಕಟ್ಟು ಅಧ್ಯಯನದ ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರವಾಗಿದ್ದು, ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯ ಪ್ರಕಟಿಸಿದೆ.